**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.848/2023.**

ಪಿರ್ಯಾದುದಾರರುಃ- ಸೇಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ
ಕೋ-ಆಪರೇಟಿವ್ ಸೊಸೈಟಿ ಲಿ., ಶಾಖೆಃ ಮಂಕಿ,
ಪ್ರತಿನಿಧಿಸುವವರು,
ಶ್ರೀ ಅಣ್ಣಪ್ಪ ನಾಯ್ಕ,
ವಯಸ್ಸು ಸುಮಾರು 37 ವರ್ಷ,
ವೃತ್ತಿಃ- ಸಹಾಯಕ,
ತಾಲೂಕುಃ- ಹೊನ್ನಾವರ (ಉ.ಕ.).

**-ವಿರುದ್ಧ-**

ಆರೋಪಿಯ ಹೆಸರುಃ- ಗಣಪತಿ ನಾಗಪ್ಪ ನಾಯ್ಕ,
ಸಾಕೀನಃ- ಕುಂಬಾರಕೇರಿ, ಮಾರ್ಕಂಡೇಶ್ವರ,
ಅಂಚೆಃ- ಬಳಕೂರು,
ತಾಲೂಕುಃ- ಹೊನ್ನಾವರ (ಉ.ಕ.).

****

**ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರನ್ವಯ ಆರೋಪಿಯ ಹೇಳಿಕೆ.**

ಪ್ರಶ್ನೆಃ 1. ನೀವು ಪಿರ್ಯಾದುದಾರರ ಪರವಾಗಿ ಫ್ರಾಸಾ-1 ರವರ ಹೇಳಿಕೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ- ಕೇಳಿದ್ದೇನೆ

ಪ್ರಶ್ನೆಃ 2. ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದಿಯವರ ಸಂಸ್ಥೆಯಲ್ಲಿ Business Loan ಖಾತೆ ನಂ.ಬಿ.ಎಲ್-1461 ರಡಿಯಲ್ಲಿ ಸಾಲವನ್ನು ಪಡೆದುಕೊಂಡಿದ್ದು ಇರುತ್ತದೆ. ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಕೆನರಾ ಬ್ಯಾಂಕ್., ಮುರ್ಡೇಶ್ವರ** ಶಾಖೆಯ ನಿಪಿ-1ರ ಚೆಕ್ ನಂ.863851 ನ್ನು ದಿನಾಂಕ 15-06-2023 ರಂದು ರೂ. 56,193/- ಎಂದು ನಮೂದಿಸಿ

ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿರುತ್ತೀರೆಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು

ಪ್ರಶ್ನೆಃ 3. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿಯವರು ಹಣ ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆನರಾ ಬ್ಯಾಂಕ್., ಮಂಕಿ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, 'Funds Insufficient' ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 17-06-20243 ರಂದು ನಿಪಿ-2 ರ ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು

ಪ್ರಶ್ನೆಃ 4. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿಯವರು ನಿಮಗೆ ನಿಪಿ-3 ರಂತೆ ವಕೀಲರ ಮೂಲಕ ದಿನಾಂಕ 26-06-2023 ರಂದು ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕ 05-07-2023 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು

ಪ್ರಶ್ನೆಃ 5. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ-6 ರ ಆಥೋರೈಸೇಷನ್ ಲೆಟರನ್ನು ಹಾಜರುಪಡಿಸಿ ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು

ಪ್ರಶ್ನೆ 6: ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯೇ?

ಆರೋಪಿಯ ಉತ್ತರಃ- ಇದೆ

ಪ್ರಶ್ನೆ 7: ಸದ್ರಿ ಪ್ರಕರಣ ಕುರಿತು ನೀವು ಏನಾದರೂ ಹೇಳುವುದು ಇದೆಯೇ?

ಆರೋಪಿಯ ಉತ್ತರಃ- ಏನು ಇಲ್ಲ

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ)

ಸಹಿ ಇದೆ/-

**ದಿನಾಂಕಃ- 25-06-2025.**

**(ಅನಿಲ್ ಜೋನ್ ಸಿಕ್ವೇರಾ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.,ಯವರ ನ್ಯಾಯಾಲಯ.,ಹೊನ್ನಾವರ.**

****

ಆರೋಪಿಯ ಸಹಿಃ- ಸಹಿ ಇದೆ